3) ಈ ಹಣದ ಸರ್ಮಪಕ ಬಳಕೆಯಾಗದಿರಲು ನಿರ್ದಿಷ್ಟ ಕಾರಣಗಳೇನಾದರೂ ಇವೆಯೇ?

1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಸ್ಥಳೀಯ ಸಂಸ್ಥೆಗಳಲ್ಲಿ ಶೇ. 18ರ ಹಣವನ್ನು ವಿನಿಯೋಗಿಸಲು ಸರ್ಕಾರ ಹೊರೆ ಇಸಿದ ಸುತ್ತೋಲೆ ಸಂಖ್ಯೆ ನಾ ಇ 119 ಟಿಎಂಎಂ 97 ದಿನಾಂಕ 22/9/2001ರಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿದೆ(ಪ್ರತಿ ಲಗುತಿಸಿದೆ).

2) ಲಭ್ಯವಿರುವ ಮಾಹಿತಿಯನ್ನು ಅನುಸರಿಸಿ ಕಳೆದ 2 ವರ್ಷಗಳಲ್ಲಿ ಹಾಗೂ ವಿನಿಯೋಗಿಸಿದವರ ವಿವರ (ನಗರಸಭೆ ಮತ್ತು ಪುರಸಭೆ)ಗಳ ಪಟ್ಟಿಯನ್ನು ಲಗತಿಸಿದೆ. ಕಳೆದ 3 ವರ್ಷಗಳ ಮಾಹಿತಿಯನ್ನು ಜಿಲ್ಲೆಗಳಿಂದ ತರಿಸಿ ಒದಗಿಸಲಾಗುವುದು.

ಈ ಮೀಸಲಾತಿ ಹಣವನ್ನು ನಿಗದಿತ ಕಾರ್ಯಕ್ರಮಗಳಿಗೆ ಖರ್ಚು ಮಾಡದೇ ಮತ್ತು ಹಣವನ್ನು ಬಾಕಿ ಉಳಿಸಿರುವ ಬಗ್ಗೆ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಆಯುಕ್ತರು, ನಗರಸಭೆ ಮತ್ತು ಮುಖ್ಯಾಧಿಕಾರಿಗಳು, ಪುರಸಭೆ ಇವರ ಮೇಲೆ ಶಿಸ್ತುಕ್ರಮ ಕೈಗೊಳ್ಳಲು ಈ ಕಛೇರಿ ಸಂಖ್ಯೆ: ಸಕನಿ/ಆರ್‌ಎಸ್ ಯು/3/ಸಿಆರ್/5/2004–05 ದಿನಾಂಕ: 20/7/2004ರಂದು ನೋಟೀಸ್ ಜಾರಿ ಮಾಡಲಾಗಿದೆ. ಜಾರಿ ಮಾಡಲಾದ ನೋಟೀಸಿಗೆ ಕೆಲವು ನಗರಸಭೆ/ಪುರಸಭೆಗಳಿಂದ ಮಾಹಿತಿ ಬಂದಿದ್ದು ಶೇ. 18ರ ಹಣವನ್ನು ಖರ್ಚು ಮಾಡಿದ ಹಾಗೂ ಮಾಡುತ್ತಿರುವ ಬಗ್ಗೆ ಮಾಹಿತಿಯನ್ನು ಸಲ್ಲಿಸಿರುತ್ತಾರೆ. ಪಟ್ಟಿಯನ್ನು ಲಗುತ್ತಿಸಲಾಗಿದೆ.

3) ಈ ವಿವರವನ್ನು ನಗರಾಬಿವೃದ್ಧಿ ಇಲಾಖೆಯಿಂದ ಪಡೆದು ಸಲ್ಲಿಸಲಾಗುವುದು.

469(30) ಶ್ರೀ ರವಿ.ಸಿ.ಟಿ. (ಚಿಕ್ಕಮಗಳೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಿಗೆ ಒಳಮೀಸಲಾತಿ ಕಲ್ಪಿಸುವ ಸಂಬಂಧ ವಿಚಾರಣಾ ಆಯೋಗ ರಚಿಸಲು ಸರ್ಕಾರ ತೀರ್ಮಾನಿಸಿದ್ದು ಯಾವಾಗ?

2) ವಿಚಾರಣ ಅಯೋಗವನ್ನು ರಚಿಸಲಾಗಿದೆಯೇ: ಹಾಗಿದ್ದಲ್ಲಿ ಅಯೋಗದ ಅಧ್ಯಕ್ಷರು ಯಾರು?

3) ಇಲ್ಲದಿದಲ್ಲಿ ಈವರೆಗೂ ಅಧ್ಯಕ್ಷರ ನೇಮಕಾತಿ ಆಗದೆ ಇರಲು ಕಾರಣವೇನು?

4) ಆಯೋಗದ ರಚನೆಯ ಉದ್ದೇಶವೇನು: ಆಯೋಗಕ್ಕೆ ವರದಿ ಸಲ್ಲಿಸಲು ಕಾಲಮಿತಿ ಹಾಕಲಾಗಿದೆಯೆ?

ಡಾ॥ ವೈ. ನಾಗಪ್ಪ(ಸಮಾಜ ಕಲ್ಯಾಣ ಸಚಿವರು) :

1) ಸರ್ಕಾರವು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳಲ್ಲಿ ಒಳಮೀಸುಲಾತಿ ಕಲ್ಪಸಲು ಜನವರಿ 2004 ರಲ್ಲಿ ಆಯೋಗವನ್ನು ರಚಿಸಲು ತೀರ್ಮಾನಿಸಿತ್ತು.

2) ಹೌದು. ಸರ್ಕಾರದ ಅಧಿಸೂಚನೆ ಸಂಖ್ಯೆ: SWD 227 SAD 2003 ದಿನಾಂಕ : 07–1–2004 ರಲ್ಲಿ ವಿಚಾರಣಾ ಅಯೋಗವನ್ನು ರಚಿಸಲಾಗಿದೆ. ಪ್ರಸ್ತುತ ಅಧ್ಯಕ್ಷರ ಹುದ್ದೆ ಖಾಲಿ ಇದೆ. ದಿನಾಂಕ: 21–1–04 ರಂದ 19–3–04 ರವರೆಗೆ ಜಿ :ಎನ್.ವೈ. ಹನುಮಂತಪ್ಪ ನಿವೃತ್ತ ನ್ಯಾಯಾದೀಶರು, ಓರಿಸ್ಸಾ ಉಚ್ಚ ನ್ಯಾಯಾಲಯ, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ತದನಂತರ

ರಾಜೀನಾಮೆ ನೀಡಿರುತ್ತಾರೆ. ದಿ:28–8–04 ರಂದು ಜಿ.ಹೆಚ್.ಜಿ ಬಾಲಕೃಷ್ಣ ನಿವೃತ ನ್ಯಾಯಧೀಶರು ಕರ್ನಾಟಕ ಉಚ್ಚ ನ್ಯಾಯಾಲಯ ಇವರನ್ನು ನೇಮಿಸಲಾಗಿತ್ತು, ಆದರೆ ಅವರು ಅದಿಕಾರ ವಹಿಸಿಕೋಳ್ಳುವ ಮುನ್ನವೆ ನಿಧನ ಹೊಂದಿರುತ್ತಾರೆ.

3) ಏಕ ಸದಸ್ಯ ವಿಚಾರಣಾ ಅಂಯೋಗ ನೇಮಕಾತಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

4) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದಲ್ಲಿರುವ ವಿವಿಧ ಉಪಜಾತಿಗಳಿಗೆ ಸಮಾನಾಂತರವಾಗಿ ಮೀಸಲಾತಿಯ ಸೌಲಭ್ಯವನ್ನು ನೀಡುವ ಉದ್ದೇಶಕ್ಕಾಗಿ ಏಕ ಸದಸ್ಯ ಆಯೋಗವನ್ನು ರಚಿಸಲಾಗಿದೆ. ಆಯೊಗಕ್ಕೆ ಅಧ್ಯಕ್ಷರು ಅದಿಕಾರ ವಹಿಸಿಕೂಂಡು ದಿನದಿಂದ 3–6 ತಿಂಗಳ ಅವದಿಯೊಳಗಾಗಿ ವರದಿಯನ್ನು ನೀಡಲು ಕಾಲಮಿತಿ ನಿಗಧಿಪಡಿಸಲಾಗುವುದು.

470(655)ಶ್ರೀ ಸರಕಾರ್ ಭೀಮಪ್ಪ ಚನ್ನಪ್ಪ(ರಾಯಭಾಗ) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 2000–01ನೇ ಸಾಲಿನ ಸಿ.ಎ.ಜಿ ವರದಿಯಲ್ಲಿ ಕೆ.ಐ.ಎ.ಡಿ.ಬಿ. ಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವ ಬಗ್ಗೆ ವರದಿಯಾಗಿರುವುದು ನಿಜವೆ?

ಆ) ಹಾಗಿದ್ದಲ್ಲಿ ಈ ಅವ್ಯವಹಾರದಲ್ಲಿ ಭಾಗಿಯಾಗಿರುವ ತಪ್ಪಿತಸ್ಥ ಅಧಿಕಾರಿಗಳು ಯಾರು?

ಇ) ಅವರ ವಿರುದ್ಧ ಸರ್ಕಾರ ಎನು ಕ್ರಮ ತೆಗೆದುಕೂಂಡಿದೆ?

ಈ) ಕ್ರಮ ತೆಗೆದುಕೂಳ್ಳದಿದ್ದರೆ ಕಾರಣವೇನು?

ಉ) ಎಷ್ಟು ದಿನಗಳೊಳಗೆ ಕ್ರಮ ತೆಗೆದು ಕೊಳ್ಳಲಾಗುತ್ತದೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ(ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು

ಆ) ಕೆ.ಐ.ಎ.ಡಿ.ಬಿ. ಯಲ್ಲಿ ಈ ವಿಚಾರವನ್ನು ದಿನಾಂಕ : 15–10–2003 ರಂದು ನಡೆದ ಸಭೆಯಲ್ಲಿ ಸುಧೀರ್ಘವಾಗಿ ಚರ್ಚಿಸಿ, ಬಿಡದಿ ಕಾಮಗಾರಿ ಕೆಲಸದಲ್ಲಿ ಭೂಸ್ವಾಧೀನ ಕ್ರಿಯೆಯಲ್ಲಿ ಆಗಿರುವ ಅಕ್ರಮಗಳನ್ನು ತನಿಖೆ ಮಾಡಲು ಸಿ.ಓ.ಡಿ.ಗೆ ವಹಿಸಲು ನಿರ್ದರಿಸಿ ದಿನಾಂಕ : 10–11–2003 ರಂದು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದೆ.

ಈ ವಿಚಾರವನ್ನು ಪರಿಶೀಲಿಸಲಾಗುತ್ತಿದೆ.

ಇ) –ಪರಿಶೀಲಿಸಲಾಗುತ್ತಿದೆ–

ಈ) –ಉದ್ಭವಿಸುವುದಿಲ್ಲ–

ಉ) –ಉದ್ಭವಿಸುವುದಿಲ್ಲ–